ದಾಖಲೆ ವೆರಿಫಿಕೇಶನ್‌ಗೆ ಒಂದು ತಿಂಗಳು, ಆರು ತಿಂಗಳು ಜಿಲ್ಲಾಧಿಕಾರಿಗಳ ಕಛೇರಿಗೆ ಅಲೆಯುತ್ತಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೆ, ಬೇಗ ಇತ್ಯರ್ಥ ಮಾಡುವುದಕ್ಕೆ ಸೂಕ್ತ ಆದೇಶ ನೀಡುತ್ತೇನೆ.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ದಿನಾಂಕ 7–8–03ರಂದು ಉತ್ತರಿಸುವ ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 42ನೇ ಪಟ್ಟಿಯಲ್ಲಿರುವ 61 ಪ್ರಶ್ನೆಗಳ ಪೈಕಿ 54 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅನುಬಂಧ – IV

ಉಪಾಧ್ಯಕ್ಷರು : ಮಂಡಿಸಲಾಯಿತು.

7. ವರದಿಗಳನ್ನು ಒಪ್ಪಿಸುವುದು

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಉಪಾಧ್ಯಕ್ಷರೆ, ಬಿ.ಬಿ. ಶಿವಪ್ಪ, ಅಧ್ಯಕ್ಷರು, ಅಂದಾಜುಗಳ ಸಮಿತಿ, ಇವರ ಪರವಾಗಿ ಅಂದಾಜುಗಳ ಸಮಿತಿಯ 2002–03ನೇ ಸಾಲಿನ ನಾಲ್ಕನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಉಪಾಧ್ಯಕ್ಷರೆ, ಶ್ರೀ ವಿಜಯ್‌ಕುಮಾರ್ ಶೆಟ್ಟಿ, ಅಧ್ಯಕ್ಷರು, ಸಾರ್ವಜನಿಕ ಉದ್ದಿಮೆಗಳ ಸಮಿತಿ, ಇವರ ಪರವಾಗಿ ಕೃಷ್ಣಾ ಜಲ ಭಾಗ್ಯ ನಿಗಮ ನಿಯಮಿತ ಸಂಸ್ಥೆಗೆ ಸಂಬಂಧಪಟ್ಟಂತೆ ಸಾರ್ವಜನಿಕ ಉದ್ದಿಮೆಗಳ ಸಮಿತಿಯ 101 ಮತ್ತು 102ನೇ ವರದಿಯನ್ನು ಸಮಿತಿ ಸದಸ್ಯನಾಗಿ ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಮನೋಹರ್ ಹೆಚ್. ತಹಸೀಲ್ದಾರ್ (ವಿಧಾನಸಭೆಯ ಉಪ ಸಭಾಧ್ಯಕ್ಷರು ಮತ್ತು ಅಧ್ಯಕ್ಷರು ಅರ್ಜಿಗಳ ಸಮಿತಿ) : ಅರ್ಜಿಗಳ ಸಮಿತಿಯ ಅಧ್ಯಕ್ಷನಾದ ನಾನು ನಾಲ್ಕನೇ ಹಾಗೂ ಐದನೇ ವರದಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ) ಉಪಾಧ್ಯಕ್ಷರೆ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷನಾದ ನಾನು ಜನಸಂಪನ್ಮೂಲ ಇಲಾಖೆ ಕುರಿತಂತೆ ಸಮಿತಿಯ ಹದಿನಾರು ಮತ್ತು ಹದಿನೇಳನೇ ವರದಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಉಪಾಧ್ಯಕ್ಷರು : ಎಲ್ಲಾ ವರದಿಗಳನ್ನು ಒಪ್ಪಿಸಲಾಯಿತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಉಪಾಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಇವತ್ತು ಒಂದು ವಿಚಾರವನ್ನು ಪ್ರಸ್ತಾಪ ಮಾಡಲು ಬಯಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕದ ಮಧ್ಯಮಾವಧಿ.....

ಉಪಾಧ್ಯಕ್ಷರು : ಶೂನ್ಯ ವೇಳೆ ಎಲ್ಲಿದೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಪ್ರಶ್ನೋತ್ತರ ಮುಗಿಯಿತಲ್ಲಾ.